# ತೂಗು ಗಿಡಗಳ ಜೋಗುಳ



**ಜಾಗವಿಲ್ಲವೆಂದು ಬೇಸರಿಸಬೇಕಿಲ್ಲ, ನಿರ್ವಹಣೆ ಬಗ್ಗೆ ಚಿಂತಿಸಬೇಕಿಲ್ಲ. ಪುಟ್ಟ ಜಾಗದಲ್ಲೇ ಹಸುರು ತುಂಬಬಲ್ಲ ಈ ತೂಗು ಗಿಡಗಳು ನಗರವಾಸಿಗಳಿಗೆ ಹೇಳಿಮಾಡಿಸಿದಂತಿವೆ. ಗಿಡ ಬೆಳೆಸುವ ಮನಸ್ಸುಳ್ಳವರಿಗೆ ಉತ್ತಮ ಆಯ್ಕೆಯಾಗಿವೆ.**

■ ಸೀಮಾ ಹೆಗಡೆ

ಗೋಡೆಗಂಟಿಸಿದ ನಲವತ್ತಿಂಚಿನ ಟೀವಿ; ಅಕ್ಕ ಪಕ್ಕ ಶೋಕೇಸ್; ಮುಂದೊಂದು ಸೋಫಾ; ಪತ್ರಿಕೆ–ಪುಸ್ತಕ ಜೋಡಿಸಿಟ್ಟ ಟೇಬಲ್; ಒಂದೆರಡು ಕುರ್ಚಿ; ಹರಗಣವನ್ನೆಲ್ಲಾ ಬಚ್ಚಿಡಲೊಂದು ಕಪಾಟು. ಇಂತಹ ನೀರಸ 'ಲಿವಿಂಗ್ ರೂಮ್'ಗೆ ಜೀವ ತುಂಬುವ ಒಳಾಂಗಣ ಸಸ್ಯಗಳು ಇವತ್ತಿನ ಪೇಟೆ ಮಂದಿಯ ಹೊಸ ಆಕರ್ಷಣೆ.

ಮನೆಯೊಳಗೆ ಸಸ್ಯಸಂಪತ್ತನ್ನು ಬರಮಾಡಿಕೊಂಡು ಅವುಗಳ ಆರೈಕೆಯಲ್ಲಿ ಖುಷಿ ಕಾಣುತ್ತಿರುವ ನಗರವಾಸಿಗಳು ಹಲವರು. ನರ್ಸರಿಗೆ ಹೋದಾಗಲೆಲ್ಲಾ ಹೊಸ ಗಿಡ ಕೊಳ್ಳುವ ಆಸೆ ಅವರದು. ಆದರೇನು? ಜಾಗದ್ದೇ ಸಮಸ್ಯೆ. ಈ ಹಿನ್ನೆಲೆಯಲ್ಲಿ 'ಹ್ಯಾಂಗಿಂಗ್ಸ್'ಗಳ ಟ್ರೆಂಡ್ ಹಸುರು ಮನಸ್ಸುಗಳನ್ನು ಆಕರ್ಷಿಸುತ್ತಿದೆ.

### ಚಾವಣಿ, ಗಾರ್ಡನ್ ಆದಾಗ...

ಮನೆ ಕಟ್ಟುವಾಗ ಸಾಮಾನ್ಯವಾಗಿ ಚಾವಣಿಗೆ 'ಹುಕ್'ಗಳನ್ನು ನಿರ್ಮಿಸಿಯೇ ಇರುತ್ತಾರೆ. ಅವುಗಳನ್ನು ವಿಭಿನ್ನ ರೀತಿಯಲ್ಲಿ ಬಳಸುವ, 'ಝೂಮರ್' ದೀಪಗಳನ್ನು ಸಸ್ಯಗಳಿಂದ ಬದಲಿಸುವ ಸುಸಮಯವಿದು. ಮನೆಯ ಹಜಾರ, ಬಾಲ್ಕನಿಯ ಚಾವಣಿಗಿರುವ ಕೊಕ್ಕೆ–ಕೊಂಡಿಗಳಿಗೆಲ್ಲಾ ಹ್ಯಾಂಗಿಂಗ್ ಗಿಡಗಳನ್ನು ಸಿಕ್ಕಿಸಿ, ಇಳಿಯುವ ತರುಲತೆಗಳ ಸೌಂದರ್ಯವನ್ನು ಅನುಭವಿಸುವ ಸಂದರ್ಭವಿದು.

ಕ್ರಿಯಾಶೀಲತೆಯ ಅನುಸಾರವಾಗಿ ಕರ್ಟನ್ ರಾಡ್‌ಗಳು, ಬಟ್ಟೆಯ ನ್ಯಾಲೆಗಳು ಕೂಡ ಹ್ಯಾಂಗಿಂಗ್ ಪಾಟ್‌ಗಳ ನೆಚ್ಚಿನ ನೆಲೆಯಾಗಬಹುದು. ಹುಕ್‌ಗಳಿಲ್ಲದಿದ್ದರೂ ಪರವಾಗಿಲ್ಲ, ಗೋಡೆಯಿಂದ ಮುಂದೆ ಚಾಚಿದ ಕಬ್ಬಿಣದ ಸ್ಟಾಂಡ್‌ಗಳ ಮೂಲಕ ಹ್ಯಾಂಗಿಂಗ್ ಕುಂಡಗಳನ್ನು ತೂಗುಹಾಕಬಹುದು.

ಮನೆಯ ವಿನ್ಯಾಸಕ್ಕೆ ತಕ್ಕಂತೆ ಸೆರಾಮಿಕ್ ಕುಂಡಗಳು, ಗಾಜಿನ ಗೋಳಗಳು, ಮ್ಯಾಕ್ರೇಮ್ ಹ್ಯಾಂಗರ್‌ಗಳಲ್ಲಿ ಪುಟ್ಟ ಗಿಡಗಳನ್ನು ಕೂರಿಸಿ ಇಳಿಬಿಡಬಹುದು. ಟೆರೇರಿಯಮ್, ಕೊಕೆಡಾಮಾಗಳನ್ನು ನೇತು ಹಾಕಬಹುದು. ಹೆಚ್ಚಿನ ಬೇಡಿಕೆಯಲ್ಲಿರುವ, ನೈಸರ್ಗಿಕವಾಗಿ ಕಾಣುವ ತೆಂಗಿನ ನಾರಿನ 'ಕಾಯಿರ್ ಪಾಟ್'ಗಳನ್ನು ಬಳಸಬಹುದು. ಹ್ಯಾಂಗಿಂಗ್ ಗಿಡಗಳ ನೋಟವೇನೋ ಮಾಟವೇ. ಆದರೆ ಅವುಗಳ ನಿರ್ವಹಣೆ ತೀರಾ ಸುಲಭದ್ದಲ್ಲ. ಹಾಗಾಗಿ ಕೆಳಗಿನ ಕೆಲ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳುವುದು ಒಳ್ಳೆಯದು.

### ತೂಗು ಕುಂಡಗಳಿಗೆ ಸಸ್ಯಗಳ ಆಯ್ಕೆ

ಯಾವುದೇ ಸ್ಥಳಕ್ಕೂ ಒಪ್ಪುವ ವೈವಿಧ್ಯ ಒಳಾಂಗಣ ಸಸ್ಯಗಳಿಲ್ಲಿದೆ. ಬೆಳಕು, ಸಸ್ಯದ ಬೆಳವಣಿಗೆ, ನಮ್ಮ ಅನುಕೂಲತೆ ಆಧರಿಸಿ ಹ್ಯಾಂಗಿಂಗ್ ಸಸ್ಯಗಳನ್ನು ಆಯ್ಕೆ ಮಾಡುವುದು ಅವಶ್ಯಕ. ಮನೆಯ ಸೀಲಿಂಗ್ ಎಂದರೆ ಬೆಳಕು ಅಷ್ಟಕ್ಕಷ್ಟೆ. ಅಂತಹ ಜಾಗಗಳಲ್ಲಿ ಮನಿ ಪ್ಲಾಂಟ್, ಫಿಲೋಡೆಂಡ್ರಾನ್, ಇಂಗ್ಲಿಷ್ ಐವಿ, ಗ್ರೇಪ್ ಐವಿಗಳು ಒಳ್ಳೆಯ ಆಯ್ಕೆ.

ತುಸು ಪ್ರಕಾಶಮಾನವಾದ ಕಿಟಕಿ ಬಳಿಯ ಸ್ಥಳಗಳಿಗೆ, ಹೊರಗಿನ ಹಜಾರಕ್ಕೆ ಸ್ಟ್ರಿಂಗ್ ಆಫ್ ಪರ್ಲ್, ಸ್ಟ್ರಿಂಗ್ ಆಫ್ ಡಾಲ್ಫಿನ್, ಸ್ಟ್ರಿಂಗ್ ಆಫ್

